2013–14ನೇ ಸಾಲಿನ ಆಧುನೀಕರಣ ಯೋಜನೆ ಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಹುಮ್ನಾಬಾದ್ ಸಂಚಾರಿ ಪೊಲೀಸ್ ಠಾಣೆಯನ್ನು ನಿರ್ಮಿಸಲಾಗುತ್ತಿದ್ದು, ನ್ಯಾಯಾಲಯದ ತಡೆ–ಯಾಜ್ಞೆಯಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ.

ಇ) ನ್ಯಾಯಾಲಯದಿಂದ ತಡೆಯಾಜ್ಞೆ ತೆರವಾದ ನಂತರ ಸದರಿಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಬೆಂಗಳೂರಿನ ನಂದಿನಿ ಬಡಾವಣೆಯನ್ನು ರೆಗ್ಯುಲರೈಸ್ ಮಾಡುವುದು

51(191); ಶ್ರೀ ಗೋಪಾಲಯ್ಯ ಕೆ (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರಿನ ನಂದಿನ ಬಡಾವಣೆಯಲ್ಲಿರುವ ಮನೆ / ವಾಣೀಜ್ಯ ಸಂಕೀರ್ಣಗಳೆಷ್ಟು;

ಆ) ಈ ಬಡಾವಣೆಯನ್ನು ಯಾವಾಗ ನಿರ್ಮಿಸಲಾಯಿತು;

ಇ) ಇಲ್ಲಿರುವ ಮನೆಗಳನ್ನು ರೆಗ್ಯುಲರೈಸ್ ಮಾಡದಿರಲು ಕಾರಣಗಳೇನು;

ಈ) ಈ ಬಡಾವಣೆಯ ಪೂರ್ತಿ ಅಭಿವೃದ್ಧಿಯಾಗಿದೆಯೇ; ಇಲ್ಲಿರುವ ಮನೆಗಳನ್ನು ರೆಗ್ಯುಲರೈಸ್ ಮಾಡಬೇಕೆಂದು ವಿಧಾನ ಮಂಡಲದ ಅರ್ಜಿ ಸಮಿತಿ ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಬಡಾವಣೆಯಲ್ಲಿನ ಮನೆ /ವಾಣೆಜ್ಯ ಸಂಕೀರ್ಣಗಳನ್ನು ರೆಗ್ಯುಲರೈಸ್ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಪ್ರಾಧಿಕಾರದಿಂದ ಹಂಚಿಕೆ ಮಾಡಿರುವ ನಿವೇಶನಗಳಲ್ಲಿ ಕಟ್ಟಿರುವ ಕಟ್ಟಡಗಳ ಸಂಖ್ಯೆ : 873
ಅನಧಿಕೃತ ಕಟ್ಟಡಗಳು : 5678
ಒಟ್ಟು: 6551
ವಾಣೆಜ್ಯ ಸಂಕೀರ್ಣ : 01

ಆ) 1986 ರಲ್ಲಿ ಬಡಾವಣೆ ನಿರ್ಮಿಸಲಾಗಿದೆ.

ಇ) ನಂದಿನಿ ಬಡಾವಣೆ ವ್ಯಾಪ್ತಿಗೆ ಬರುವ ಸರ್ವೆನಂಬರ್‌ಗಳಲ್ಲಿರುವ ಕಂದಾಯ ನಿವೇಶಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ ಕಲಂ 38(ಸಿ) ರ ವ್ಯಾಪ್ತಿಗೆ ರೀಕನ್ವೆ ಮಾಡಲು ನಿಯಮಾವಳಿಗಳಲ್ಲಿ ಅವಕಾಶ ಇಲ್ಲದೇ ಇರುವುದರಿಂದ ರೆಗ್ಯುಲರೈಸ್ ಮಾಡಲು ಆಗಿರುವುದಿಲ್ಲ.

ಮುಂದುವರೆದು ಸದರಿ ವಿಷಯದ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಲಗ್ಗೆರೆ ಗ್ರಾಮದ ನಂದಿನಿ ಬಡಾವಣೆ ವ್ಯಾಪ್ತಿಗೆ ಬರುವ ವಿವಿಧ ಸರ್ವೆ ನಂಬರ್‌ಗಳಲ್ಲಿನ ರೆವಿನ್ಯೂ ನಿವೇಶನಗಳಲ್ಲಿ ಮನೆ ನಿರ್ಮಿಸಿಕೊಂಡು ವಾಸವಾಗಿರುವ ಮಾಲೀಕರುಗಳಿಂದ ಉತ್ತಮತೆ ಶುಲ್ಕ ಪಾವತಿಸಿಕೊಳ್ಳುವ ಬಗ್ಗೆ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯವನ್ನು ಪಡೆಯಲು ನಿರ್ಣಯಿಸಲಾಗಿದೆ. ಅದರಂತೆ ದಿನಾಂಕ 05.12.2014 ರಂದು ಪ್ರಾಧಿಕಾರದ ಪತ್ರ ಸ್ವೀಕೃತಗೊಂಡಿದ್ದು, ಪರಿಶೀಲಿಸಲಾಗುತ್ತಿದೆ.

ಈ) ದಿನಾಂಕ: 22/5/2014 ರಂದು ಜರುಗಿದ ವಿಧಾನ ಸಭೆಯ ಅರ್ಜಿ ಸಮಿತಿಯ ವಿಶ್ಲೇಷಣೆ ಮತ್ತು ಶಿಫಾರಸ್ಸು ಈ ಕೆಳಕಂಡಂತಿರುತ್ತದೆ;

"ಪ್ರಸಕ್ತ ಸಂದರ್ಭದಲ್ಲಿ ಪ್ರಾಧಿಕಾರ ಅಥವಾ ಬಿ.ಬಿ.ಎಂ.ಪಿ ಅನಧಿಕೃತ ನಿರ್ಮಾಣವನ್ನು 37 ವರ್ಷಗಳ ವಿಳಂಬದ ನಂತರ ತೆರವುಗೊಳಿಸುವುದು ಅಥವಾ ಕಾನೂನು ರೀತ್ಯಾ ಕ್ರಮಜರುಗಿಸುವುದು ಕಷ್ಟಸಾಧ್ಯ ಎಂದು ಸಮಿತಿ ಅಭಿಪ್ರಾಯ ಪಡುತ್ತದೆ. ಈ ಹಿನ್ನೆಲೆಯಲ್ಲಿ ನಿಯಮಾವಳಿಗಳ ಅನುಗುಣವಾಗಿ ಅಥವಾ ಶಾಸನ ಬದ್ಧ ಪಾವತಿಗಳನ್ನು ದೃಢೀಕರಿಸಿಕೊಳ್ಳುವ ನಿಬಂಧನೆಗೊಳಪಟ್ಟಂತೆ ಸದರಿ ಬಡಾವಣೆಯ ಅನಧಿಕೃತ ನಿರ್ಮಾಣವನ್ನು ಅಕ್ರಮ – ಸಕ್ರಮ ಯೋಜನೆಯಡಿ ಸಕ್ರಮೀಕರಣಗೊಳಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಬೇಕೆಂದು ಸಮಿತಿಯ ಶಿಫಾರಸ್ಸು ಮಾಡುತ್ತದೆ" ಎಂದು ಅರ್ಜಿ ಸಮಿತಿಯು ನಿರ್ಣಯಿಸಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ. 14437 ಸೇರ್ಪಡೆಗೊಂಡ 16439 & 18660/2007 (ಎಲ್‌ಬಿ–ಆರ್‌ಇಎಸ್–ಪಿಐಎಲ್) ರ ಪ್ರಕರಣದಲ್ಲಿ ಸಹಾ ತಡೆಯಾಜ್ಞೆ ಮುಂದುವರೆಸಿರುವುದುರಿಂದ ನಂದಿನಿ ಬಡಾವಣೆಯಲ್ಲಿನ ಅಕ್ರಮ ಕಟ್ಟಡಗಳನ್ನು ಅಕ್ರಮ–ಸಕ್ರಮ ಯೋಜನೆಯಡಿ ಸಕ್ರಮಗೊಳಿಸುವ ಬಗ್ಗೆ ಮಾನ್ಯ ನ್ಯಾಯಲಯವು ತಡೆಯಾಜ್ಞೆ ತೆರವುಗೊಳಿಸುವವರೆಗೆ ಕ್ರಮವಹಿಸಲು ಸಾಧ್ಯವಿಲ್ಲದಿರುವ ಅಂಶವನ್ನು ಅರ್ಜಿ ಸಮಿತಿಯ ಗಮನಕ್ಕೆ ತರಲಾಗಿದೆ.

ಉ) ಪರಿಶೀಲಿಸಲಾಗುವುದು.

ಟ್ರೇಡ್ ಲೈಸನ್ಸ್ ರದ್ದು ಪಡಿಸುವುದು

53(193); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವ್ಯಾಪಾರ ಮಳಿಗೆಗಳೆಷ್ಟು; ಟ್ರೇಡ್ ಲೈಸನ್ಸ್ ಪೆಡೆದುಕೊಂಡಿರುವ ಕೈಗಾರಿಕೆಗಳೆಷ್ಟು;

ಆ) ಈ ಟ್ರೇಡ್ ಲೈಸನ್ಸ್‌ನಿಂದ ವ್ಯಾಪಾರಿಗಳು ಹಾಗೂ ಕೈಗಾರಿಕೋದ್ಯಮಿಗಳಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ವ್ಯಾಪಾರಿಗಳು ಹಾಗೂ ಕೈಗಾರಿಕೋದ್ಯಮಿಗಳು ಪಡೆಯಬೇಕಾಗಿರುವ ಟ್ರೇಡ್ ಲೈಸನ್ಸ್ ರದ್ದುಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 4 ಲಕ್ಷದಷ್ಟು ವ್ಯಾಪಾರ ಮಳಿಗೆಗಳಿದ್ದು, 3863 ಕೈಗಾರಿಕೆಗಳು ಪರವಾನಗಿ ಪಡೆದು ಉದ್ದಿಮೆ ನಡೆಸುತ್ತಿದ್ದಾರೆ.

ಆ) ಬಿ.ಬಿ.ಎಂ.ಪಿ.ಯಲ್ಲಿ ಉದ್ದಿಮೆದಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ದಿನಾಂಕ: 03–02–2014 ರಿಂದ ಟ್ರೇಡ್ ಲೈಸನ್ಸ್‌ನ್ನು ಆನ್‌ಲೈನ್